ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, hostel ಅನ್ನು hand over ಮಾಡಿಕೊಂಡು ಮಕ್ಕಳು ಅಲ್ಲಿ ಇರುವುದಕ್ಕೆ ಮತ್ತು ಓದುವುದಕ್ಕೆ ಅನುಕೂಲ ಮಾಡಿಕೊಡಿ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾಳೆ ಈ ವಿಷಯವಾಗಿ ಮತ್ತೊಮ್ಮೆ ಸಚಿವರೊಂದಿಗೆ ಚರ್ಚೆ ಮಾಡೋಣ.

ಅಧ್ಯಕ್ಷರು : ಮಾನ್ಯ ಪಾಟೀಲ್ ರವರೆ, ಉತ್ತರವನ್ನು ತರಿಸಿಕೊಡುತ್ತಾರೆ. ಮಾನ್ಯ ರುದ್ರಪ್ಪ ಮಾನಪ್ಪ ಲಮಾಣಿ, ಇಲ್ಲ. ಮಾನ್ಯ ರಾಜಣ್ಣ, ಇಲ್ಲ.

V) ವಿಷಯ : ಪುಷ್ಪಲತಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸದೆ ಇರುವ ಬಗ್ಗೆ

ಶ್ರೀಮತಿ ಶಕುಂತಳಾ ಟಿ.ಶೆಟ್ಟಿ(ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ಕ್ಷೇತ್ರದ ಹೃದಯ ಭಾಗ ಉಪ್ಪಿನಂಗಡಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ವಾಸಿಸುತ್ತಿದ್ದ ಪುಷ್ಪಲತಾ ಎಂಬುವವರು ದಿನಾಂಕ 05.06.2014 ರಂದು ಹಾಡುಹಗಲೇ ಕೊಲೆಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನು ಯಾರನ್ನು ಬಂಧಿಸದಿರುವುದು ಕ್ಷೇತ್ರದ ಮಹಿಳೆಯರಲ್ಲಿ ಆತಂಕ ಹುಟ್ಟಿಸಿದೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಉಪ್ಪಿನಂಗಡಿಯ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ವಾಸಿಸುತ್ತಿದ್ದ ಪುಷ್ಪಲತಾ ಎಂಬುವವರು ದಿನಾಂಕ 05–06–2014 ರಂದು ಹಾಡುಹಗಲೇ ಕೊಲೆಯಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನು ಯಾರನ್ನು ಬಂಧಿಸದಿರುವುದು ಕ್ಷೇತ್ರದ ಮಹಿಳೆಯರಲ್ಲಿ ಆತಂಕ ಹುಟ್ಟಿಸಿದೆ. ತನ್ನ ಕ್ಷೇತ್ರದ ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ಹಾಗೂ ಕ್ಷೇತ್ರದ ಮಹಿಳೆಯರ ಮಾನ–ಪ್ರಾಣದ ಹಿತದೃಷ್ಟಿಯಿಂದಾಗಿ ಈ ಕೊಲೆಗೆ ಸಂಬಂಧಪಟ್ಟಂತೆ ದಿನಾಂಕ 09–07–2014ರಂದು ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವಂತೆ ಕೋರಿರುತ್ತಾರೆ.

ಶ್ರೀ ಕೆ.ಜೆ. ಜಾರ್ಜ್(ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರಕರಣದ ಸಾರಾಂಶವೇನೆಂದರೆ, ದಿನಾಂಕ : 05–06–2014 ರಂದು ಬೆಳಿಗ್ಗೆ 08.30 ಗಂಟೆಗೆ ಶ್ರೀಮತಿ. ಪುಷ್ಪಲತಾ ರವರ ಪತಿಯಾದ ಗುರುಮೂರ್ತಿ ಆರ್. ಎಂಬವರು ಮುಖ್ಯೋಪಾಧ್ಯಾಯರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸರ್ಕಾರಿ ಪ್ರೌಢಶಾಲೆ, ಹಿರೆಬಂಡಾಡಿ ಇಲ್ಲಿಗೆ ಕರ್ತವ್ಯಕ್ಕೆ ತೆರಳಿದ್ದು, ಮಧ್ಯಾಹ್ನ ಮಕ್ಕಳು ಮನೆಗೆ ಬಂದಾಗ ಪಕ್ಕದ ಮನೆಯ ಸೆಬಾಸ್ಟಿಯನ್ ಎಂಬವರು ಫೋನ್ ಮಾಡಿ ಅವರ ಪತ್ನಿ ಎಲ್ಲಿಗೋ ಬೀಗ ಹಾಕಿ ಹೋಗಿದ್ದು ಎಂದು ಫೋನ್‌ನಲ್ಲಿ ತಿಳಿಸಿದ್ದು, ತಕ್ಷಣ ಮನೆಗೆ ಹೋಗಿ ಅಕ್ಕಪಕ್ಕದ ಮನೆಯಲ್ಲಿ ಹುಡುಕಾಡಿ ಪಕ್ಕದ ಮನೆಯ ಕ್ರಿಸ್ಟಿನ್ ಲಸ್ರಾದೋ ಎಂಬವರಲ್ಲಿ ವಿಚಾರಿಸಿರುತ್ತಾರೆ. ನಂತರ ಸಂಜೆ 04.15 ಗಂಟೆಗೆ ಶಾಲೆಯಿಂದ ಬಂದು ಶಿಕ್ಷಕರಾದ ಫಿರೋಕ್ ನಾಯ್ಕ ಕೆ. ಹಾಗೂ ಉಪನ್ಯಾಸಕ ಸಬಾಸ್ಟಿಯನ್ ರವರ ಜೊತೆ ಬಾಗಿಲನ್ನು ತೆರೆದು ನೋಡಲಾಗಿ ಶ್ರೀಮತಿ. ಪುಷ್ಪಲತಾ ರವರನ್ನು ಯಾರೋ ದುಷ್ಕರ್ಮಿಗಳು ಯಾವುದೋ ಆಯುಧದಿಂದ ಕುತ್ತಿಗೆಯನ್ನು ಕೊಯ್ದು ಕೊಲೆ ಮಾಡಿ ಕುತ್ತಿಗೆಯಲ್ಲಿದ್ದ ಸುಮಾರು 65 ಗ್ರಾಂ ತೂಕದ ರೂ. 2 ಲಕ್ಷ ಮೌಲ್ಯದ ಚಿನ್ನದ ಮಾಂಗಲ್ಯ ಸರ ಹಾಗೂ ಕಪಾಟಿನಲ್ಲಿರಿಸಿದ್ದ ರೂ, 3,500/– ನಗದು ಹಣ ಹಾಗೂ ರೂ. 2,000/– ಚಿಲ್ಲರೆ ಹಣವನ್ನು ದೋಚಿಕೊಂಡು ಹೋಗಿರುತ್ತಾರೆಂದು ಶ್ರೀಮತಿ. ಪುಷ್ಪಲತಾ ರವರ ಪತಿ ಶ್ರೀ. ಗುರುಮೂರ್ತಿ ಆರ್. ಅವರು ನೀಡಿದ ದೂರಿನಂತೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಅ.ಕ್ರ. 127/2014 ಕಲಂ 392, 302 ಭಾ.ದಂ.ಸಂ. ಯಂತೆ ಪ್ರಕರಣ ದಾಖಲಿಸಲಾಗಿರುತ್ತದೆ.

ಈ ಪ್ರಕರಣ ನಡೆದ ದಿನ ಸಿ.ಪಿ.ಐ ಪುತ್ತೂರು ಗ್ರಾಮಾಂತರ ವೃತ್ತ ರವರು ತಕ್ಷೀರು ಸ್ಥಳಕ್ಕೆ ಭೇಟಿ ನೀಡಿ ಸ್ಥಳಕ್ಕೆ ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ತರಿಸಿ ಪರಿಶೀಲನೆ ನಡೆಸಿರುವುದಾಗಿದೆ. ಬಳಿಕ ಪಂಚರ ಸಮಕ್ಷಮ ಮೃತ ಶ್ರೀಮತಿ ಪುಷ್ಪಲತಾರವರ ಶವ ಮಹಜರು ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ದೇರಳಕಟ್ಟೆಯ ಕೆ.ಎಸ್. ಹೆಗ್ಡೆ ಆಸ್ಪತ್ರೆಗೆ ಕಳುಹಿಸಲಾಗಿರುತ್ತದೆ. ಮೃತಳ ಮೊಬೈಲ್ ಕಾಲ್ ಡಿಟೈಲ್ಸ್ ಬಗ್ಗೆ ಸಿ.ಡಿ.ಆರ್.

ಗಾಗಿ ಕೋರಿಕೆ ಪತ್ರ ಸಲ್ಲಿಸಿ ಕೋರಿಕೆಯ ಮೇರೆಗೆ ದೊರೆತ ಸಿ.ಡಿ.ಆರ್ ಮಾಹಿತಿಯನ್ನು ಪರಿಶೀಲಿಸಲಾಗಿದೆ.

ದಿನಾಂಕ: 06.06.2014 ರಂದು ದೇರಳಕಟ್ಟೆ, ಕೆ.ಎಸ್.ಹೆಗ್ಡೆ ಆಸ್ಪತ್ರೆಯಲ್ಲಿ ಮರಣೋತ್ತರ ಶವ ಪರೀಕ್ಷೆ ಸಮಯ ಮೃತಳ ರಕ್ತ ಸಂಬಂಧಿಕರ ಹೇಳಿಕೆ ಪಡೆದುಕೊಳ್ಳಲಾಗಿದೆ. ಶವ ಪರೀಕ್ಷೆಯ ಬಳಿಕ ಮೃತದೇಹವನ್ನು ಗಂಡ ಗುರುಮೂರ್ತಿಯವರಿಗೆ ಬಿಟ್ಟು ಕೊಡಲಾಯ್ತು. ತನಿಖಾ ಸಮಯದಲ್ಲಿ ಮೃತಳ ಅಣ್ಣಂದಿರು, ತಾಯಿಯವರ ಹೇಳಿಕೆಗಳನ್ನು, ಪಿರ್ಯಾದುದಾರರು ಕರ್ತವ್ಯ ನಿರ್ವಹಿಸುತ್ತಿರುವ ಶಾಲಾ ಸಿಬ್ಬಂದಿಗಳನ್ನು ವಿಚಾರಣೆಗೊಳಪಡಿಸ ಲಾಗಿದೆ. ಈ ಪ್ರಕರಣದಲ್ಲಿ ನುರಿತ ಸಿಬ್ಬಂದಿಗಳನ್ನು ವಿಶೇಷ ಕರ್ತವ್ಯಕ್ಕೆ ನೇಮಿಸಿದ ಮೇರೆಗೆ ಸದ್ರಿಯವರು ಉಪ್ಪಿನಂಗಡಿ ಪರಿಸರದಲ್ಲಿ, ಕೊಳ್ಳೆಗಾಲ, ರಾಮಪುರ ಕಡೆಗಳಲ್ಲಿ ಸಂಚರಿಸಿ ಕೂಲಂಕುಷವಾಗಿ ವಿಚಾರಣೆ ನಡೆಸಿರುತ್ತಾರೆ. ಮೃತ ಪುಷ್ಪಲತಾಳು ಒಬ್ಬ ಮನೋರೋಗಿಯಾಗಿದ್ದು ಬೆಂಗಳೂರು ಸ್ಪಂದನ ನರ್ಸಿಂಗ್ ಹೋಂನಲ್ಲಿ ಕಳೆದ 3 ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದ ಚಿಕಿತ್ಸೆ ವರದಿಯನ್ನು ಪಡೆಯಲಾಗಿದೆ.

ಪ್ರಕರಣದಲ್ಲಿ ಇಲ್ಲಿಯವರೆಗೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದು, ಮತ್ತು ಕೆಲವೊಂದು ಮಹತ್ತರದ ಸುಳುವುಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಅಲ್ಲದೆ, ಮೃತಳ ಸಾವಿನ ಬಗ್ಗೆ ತಜ್ಞರ ನಿಖರವಾದ ಅಭಿಪ್ರಾಯವು ಪೊಲೀಸ್ ಇಲಾಖೆಗೆ ತಲುಪಬೇಕಾಗಿದೆ. ತಜ್ಞರ ವರದಿಯನ್ನು ಆಧ್ಯತೆಯ ಮೇರೆಗೆ ಪಡೆದುಕೊಳ್ಳಲು ಇಲಾಖೆಗೆ ಸೂಚಿಸಲಾಗಿದೆ. ಘಟನೆ ನಡೆದಾಗ ಮನೆಯಲ್ಲಿ ಪುಷ್ಪಲತಾ ರವರು Man ಮಹಿಳೆಯಾಗಿದ್ದು, ಆದ್ದರಿಂದ ಪ್ರಕರಣದ ಬಗ್ಗೆ ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ. ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಆರೋಪಿತರ ಪತ್ತೆಗಾಗಿ ಶೋಧನೆ ನಡೆಸಲಾಗುತ್ತಿದ್ದು, ಅಲ್ಲದೆ ನುರಿತ ಅಪರಾಧ ಪತ್ತೆ ದಳ ಸಿಬ್ಬಂದಿಯನ್ನು ಸಹ ನೇಮಕ ಮಾಡಲಾಗಿದೆ. ಪ್ರಕರಣವನ್ನು ಅತಿ ಶೀಘ್ರವಾಗಿ ಪತ್ತೆ ಹಚ್ಚಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಶೆಟ್ಟಿಯವರೆ, detail ಬೇಡ. ಪುಷ್ಪಲತಾರವರ ಕೊಲೆ ಆಗಿದೆ. ಅಪರಾಧಿಯನ್ನು ಹಿಡಿದಿದ್ದಾರೆಯೇ? ಎಂಬುದು ನಿಮ್ಮ ಪ್ರಶ್ನೆಯಾಗಿದೆ.

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ : ಹೌದು, ಮಾನ್ಯ ಅಧ್ಯಕ್ಷರೆ.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟ ಹಾಗೆ, ಈಗಾಗಲೇ ಉತ್ತರವನ್ನು ಒದಗಿಸಲಾಗಿದೆ. ಬಹಳ ಮುಖ್ಯವಾಗಿ, . . .

ಅಧ್ಯಕ್ಷರು : ಮಾನ್ಯ ಜಾರ್ಜ್ ರವರೆ, ಅಪರಾಧಿಯನ್ನು ಹಿಡಿಯಲಾಗಿದೆಯೇ ಅಥವಾ ಇಲ್ಲವಾ? ಅದನ್ನು ಹೇಳಿ ಸಾಕು.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ಅದನ್ನೇ ಹೇಳುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದು, ಮತ್ತು ಕೆಲವೊಂದು ಮಹತ್ತರದ ಸುಳಿವುಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಅಲ್ಲದೆ, ಮೃತಳ ಸಾವಿನ ಬಗ್ಗೆ ನಿಖರವಾದ ಅಭಿಪ್ರಾಯವು ಪೊಲೀಸ್ ಇಲಾಖೆಗೆ ತಲುಪಬೇಕಾಗಿದೆ. ತಜ್ಞರ ವರದಿಯನ್ನು ಆಧ್ಯತೆಯ ಮೇರೆಗೆ ಪಡೆದುಕೊಳ್ಳಲು ಈಗಾಗಲೇ ಇಲಾಖೆಗೆ ಸೂಚಿಸಲಾಗಿದೆ. ಘಟನೆ ನಡೆದಾಗ ಮನೆಯಲ್ಲಿ ಪುಷ್ಪಲತಾ ರವರು ಒಂಟಿ ಮಹಿಳೆಯಾಗಿದ್ದು, ಆದ್ದರಿಂದ ಪ್ರಕರಣದ ಬಗ್ಗೆ ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ. ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಆರೋಪಿತರ ಪತ್ತೆಗಾಗಿ ಶೋಧನೆ ನಡೆಸಲಾಗುತ್ತಿದ್ದು, ಅಲ್ಲದೆ ನುರಿತ ಅಪರಾಧ ಪತ್ತೆ ದಳ ಸಿಬ್ಬಂದಿಯನ್ನು ಸಹ ನೇಮಕ ಮಾಡಲಾಗಿದೆ. ಪ್ರಕರಣವನ್ನು ಅತಿ ಶೀಘ್ರವಾಗಿ ಪತ್ತೆ ಹಚ್ಚಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ : ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು : ಪ್ರಕರಣವನ್ನು ಅತಿ ಶೀಘ್ರವಾಗಿ ಪತ್ತೆ ಹಚ್ಚಲು ಪ್ರಯತ್ನ ಮಾಡುತ್ತಾರೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಅವರ ಪ್ರಯತ್ನ ಮಾಡುತ್ತಾರೆ ಅದು ಸರಿ. ಆದರೆ, ಈ ಪ್ರಕರಣ ನಡೆದು ಸುಮಾರು ಒಂದು ತಿಂಗಳು ಆಗಿದೆ. ಆ ಮಹಳೆ ಬಟ್ಟೆ ಒಗೆಯುತ್ತಿದ್ದಳು. ಅರ್ಧ ಬಟ್ಟೆಗಳನ್ನು ಮಾತ್ರ ಒಗೆದು ಹಾಕಲಾಗಿದೆ. ಅವಳ ಮಕ್ಕಳು ಶಾಲೆಗೆ ಹೋಗುವವರೆಗೂ ಇದ್ದಳು. ಆಮೇಲೆ ಸುಮಾರು 10.00 ಗಂಟೆ ಅಂದಾಜಿಗೆ ಬಟ್ಟೆ ಒಗೆದಿದ್ದಾಳೆ. ಒಳಗೆ ಹೆಣ ಬಿದ್ದಿದೆ. ಅಲ್ಲಿ ಅನಾನಸು, ಸೌತೆಕಾಯಿಯನ್ನು cut ಮಾಡಿ ಇಟ್ಟಿದ್ದಾಳೆ. ಯಾವುದೇ ಆಚೀಚೆ ಆಗಿಲ್ಲ. ಅಲ್ಲೇ ಕೊಲೆಯಾಗಿ ಹೆಣ ಬಿದ್ದಿದೆ. ಹೊರಗಡೆಯಿಂದ ಬೀಗ ಹಾಕಿದೆ. ಆದರೆ, ಆ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿ ಜನಸಂದಣಿ ಇದ್ದ ಜಾಗದಲ್ಲಿ ಕೊಲೆ ಆಗಿದೆ. ಇದನ್ನು ಯಾರು ನೋಡಲಿಲ್ಲವೇ? ಇದು ಏಕೆ ಆಯಿತು? ಇದರ ಬಗ್ಗೆ ಇದುವರೆಗೂ ಮಾಹಿತಿ ಏಕೆ ಸಿಗುತ್ತಿಲ್ಲ? ಎನ್ನುವುದು ನನ್ನ ಪ್ರಶ್ನೆಯಾಗಿದೆ. ಹಗಲು ಹೊತ್ತಿನಲ್ಲಿ ಈ ರೀತಿ ಆದರೆ ಹೆಣ್ಣು ಮಕ್ಕಳು . . .

ಅಧ್ಯಕ್ಷರು : ಮಾನ್ಯ ಜಾರ್ಜ್‌ರವರೆ, ತಾವು ಅಲ್ಲಿ ಹೋಗಿ ಸ್ವಲ್ಪ ನೋಡಿ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಶೋಕ್ ರವರೆ, ತಾವು ಗೃಹ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಎಲ್ಲಾ ಪ್ರಕರಣಗಳನ್ನು ಪತ್ತೆ ಹಚ್ಚಿದ್ದೀರಾ?

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹಳಷ್ಟು ಕೊಲೆ ಪ್ರಕರಣಗಳನ್ನು ನಾವು ಪತ್ತೆ ಹಚ್ಚಿದ್ದೇವೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಿ, ಶ್ರೀಮತಿ ಶಕುಂತಲಾ ಶೆಟ್ಟಿಯವರು ಹೇಳಿದ ವಿಚಾರವನ್ನು ನಾನು ಮತ್ತೆ ಎಸ್.ಪಿ ಯವರಿಗೆ ಹೇಳುತ್ತೇನೆ. ಮಹಿಳೆಯ ವಿಚಾರವಾಗಿರುವುದರಿಂದ ಆದ್ಯತೆ ಮೇಲೆ ತೆಗೆದುಕೊಂಡು ಮಾಡಬೇಕಾಗಿದೆ.